**O.S.No.319/2011 - P.W.1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 19-09-2023.**

**ಮುಖ್ಯ ವಿಚಾರಣೆ - ವಾದಿಯ ಪರ ವಕೀಲರಿಂದ :**

**1)** ಈ ದಿನ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸಿ ಸಾಕ್ಷಿ ನುಡಿಯುತ್ತಿದ್ದೇನೆ.

**2)** ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

**3)** ಅಧಿಕಾರ ಪತ್ರವನ್ನು - ನಿ.ಪಿ.1 ಎಂದು, ವೀರಪ್ಪ ಮತ್ತು ವೆಂಕಟೇಶಪ್ಪ ಅವರ ಮರಣ ಪ್ರಮಾಣ ಪತ್ರಗಳನ್ನು - ನಿ.ಪಿ.2 ಮತ್ತು ನಿ.ಪಿ.3 ಎಂದು, ವಂಶವೃಕ್ಷದ ಪ್ರಮಾಣ ಪತ್ರವನ್ನು - ನಿ.ಪಿ.4 ಎಂದು, ದಾವಾ ಸ್ವತ್ತುಗಳ 13 ಪಹಣಿ ಪತ್ರಿಕೆಗಳನ್ನು - ನಿ.ಪಿ.5 ರಿಂದ ನಿ.ಪಿ.17 ಎಂದು, ಕ್ರಯದ ಕರಾರು ಪತ್ರ ದಿ.24-05-2008 ರ ದೃಢೀಕೃತ ನಕಲನ್ನು -ನಿ.ಪಿ.18 ಎಂದು, ಕ್ರಯಪತ್ರ ದಿ.11-04-2007 ರ ದೃಢೀಕೃತ ನಕಲನ್ನು - ನಿ.ಪಿ.19 ಎಂದು, ಕ್ರಯಪತ್ರ ದಿ.24-01-2007 ರ ದೃಢೀಕೃತ ನಕಲನ್ನು - ನಿ.ಪಿ.20 ಎಂದು, ಕ್ರಯಪತ್ರ ದಿ.14-02-2007 ರ ದೃಢೀಕೃತ ನಕಲನ್ನು - ನಿ.ಪಿ.21 ಎಂದು, ಋಣಭಾರ ಪ್ರಮಾಣ ಪತ್ರವನ್ನು -ನಿ.ಪಿ.22 ಎಂದು, ಮ್ಯುಟೇಶನ್ ರಿಜಿಸ್ಟರ್ ನ ಪ್ರತಿಯನ್ನು - ನಿ.ಪಿ.23 ಎಂದು ಗುರುತಿಸಲಾಯಿತು.

**ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿರುವುದರಿಂದ, ಕಾಲಾವಕಾಶವನ್ನು ನೀಡಿ, ಪ್ರಕರಣವನ್ನು ಮುಂದೂಡಲಾಯಿತು.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**